೧೧–೦೦ ಎ. ಎಂ.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೆ, ಈ ವಿಚಾರವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಉತ್ತರ ತರಿಸಿಕೊಡುತ್ತೇನೆ. ಆದರೆ ಒಂದು ವಿಷಯ. ಮೊದಲು ಪಂಚಾಯಿತಿಗಳು ಇದ್ದವು. ಅವು ಮಂಡಲ ಪಂಚಾಯಿತಿಗಳು ಆದ ಮೇಲೆ, ಕೆಲವು ಪಂಚಾಯಿತಿಗಳ ಮತ್ತು ಅಲ್ಲಿರತಕ್ಕಂತಹ ಸಿಬ್ಬಂದಿ ಬಗ್ಗೆ ಸಮಸ್ಯೆ ಇದೆ. ಮೊದಲು ಕಡಿಮೆ ಸಂಬಳದಲ್ಲಿ ಕೆಲಸ ಮಾಡುತ್ತಿದ್ದರು, ದೊಡ್ಡ ಪಂಚಾಯಿತಿ ಇದ್ದರೆ ಅಲ್ಲಿ ಹೆಚ್ಚು ಸಂಬಳ ಇತ್ತು ಈ ರೀತಿಯ ವ್ಯತ್ಯಾಸ ಇದೆ. ಈಗ ಇದು ಜಿಲ್ಲಾ ಪರಿಷತ್ತಿಗೆ ಒಳಪಡುತ್ತದೆ. ಇನ್ನು ಮಾನ್ಯ ಸದಸ್ಯರು ವರ್ಗಾವಣೆಯ ಬಗ್ಗೆ ಹೇಳಿದ್ದಾರೆ. ಆದಷ್ಟು ವರ್ಗಾವಣೆ ಮಾಡದೇ ಅದೇ ಊರಿನಲ್ಲಿ ಕೆಲಸ ಮಾಡಲಿಕ್ಕೆ ಹೇಳೋಣ.

(ಗೊಂದಲ)

ಮೊದಲಂ ಪಂಚಾಯಿತಿಗಳು ಇದ್ದಾಗ ಪ್ರತಿ ತಿಂಗಳು ೧೪೫ ರೂಪಾಯಿ ತೆಗೆದುಕೊಂಡು ಸುಮಾರು ೨೦ ವರ್ಷ ಕೆಲಸ ಮಾಡಿದ್ದಾರೆ. ಆಗ ಹೇಗೆ ಮಾಡುತ್ತಿದ್ದರು. ಒಂದೊಂದು ಪಂಚಾಯಿತಿಗೆ ೬–೭ ಜನ ಇದ್ದಾರೆ, ಸಂಬಳ ಕೊಡಲಿಕ್ಕೆ ಆಗುತ್ತದೆಯೇ? ಸುಮಾರು ೨೦ ವರ್ಷದಿಂದ ಕೆಲಸ ಮಾಡಿದ್ದಾರೆ. ಅದೇ ಸಂಬಳದಲ್ಲಿ ಅವರನ್ನು ಮುಂದುವರಿಸುತ್ತೇವೆ. ಕಡಿಮೆ ಮಾಡುವುದಿಲ್ಲ.

ಶಾಸನ ರಚನಾ ಕಾರ್ಯಕಲಾಪಗಳು

ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕ ೧೯೮೮

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಮಂತ್ರಿಗಳು) (ಕಂದಾಯ ಹಾಗೂ ಯೋಜನಾ ಮಂತ್ರಿಗಳ ಪರವಾಗಿ).—

ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕ ೧೯೮೮ ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಆಧ್ಯಕ್ಷರು.— ಪ್ರಸ್ತಾವ ಏನೆಂದರೆ "ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕ ೧೯೮೮ ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಮಂತ್ರಿಗಳು).— ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕ, ೧೯೮೮ ಸಭೆಯ ಮುಂದೆ ಮಂಡಿಸುತ್ತೇನೆ.

ಆಧ್ಯಕ್ಷರು.— ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲಾಗಿದೆ. *

ಕರ್ನಾಟಕ ಪತ್ರಿಕಾ ಸ್ವಾತಂತ್ರ್ಯ ವಿಧೇಯಕ ೧೯೮೮

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಮಂತ್ರಿಗಳು) (ಗೃಹ ಮಂತ್ರಿಗಳ ಪರವಾಗಿ).—

ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪತ್ರಿಕಾ ಸ್ವಾತಂತ್ರ್ಯ ವಿಧೇಯಕ, ೧೯೮೮ ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

---

* ANNEXURE